137

ಮೈಸೂರ ಗೆಜಿಟ.

ನಂ. XXXI. ಸರ್ಕಾರದಿಂದ ಘೋಷಿತ ಆಜ್ಞೆ. [ನಂ. 36.

ಬೆಂಗಳೂರು, ಗುರುವಾರ, ಸೆಪ್ಟೆಂಬರ್ ತಾ॥ 10, ಸ॥ 1896.

IIನೇ ಭಾಗ.

ಇಂಡ್ಯಗೆಪರ್ಮೆಂಟ್, ರೆಸಿಡೆಂಟರು, ಜೀಫ್ ಜಡ್ಜೀರು ವಗೈರೆಯವರಿಂದ ಕೊಡಲ್ಪಟ್ಟ ಇಸ್ತಿಹಾರ್‌ನಾಮೆಗಳು.

ವಿದ್ಯಾಭ್ಯಾಸದ ಇಲಾಖೆ.

ಪ್ರಕಟನ ಪತ್ರಿಕೆ.

ಮೈಸೂರು ದೇಶೀ ಪರೀಕ್ಷೆಗಳು.

ಸ॥ 1896ನೇ ಇಸವಿ ಆಗಸ್ಟು ತಾರೀಖು 6.

(i) ಸ॥ 1897ನೇ ಇಸವಿ ಡಿಸೆಂಬರು ತಿಂಗಳು ಮೊದಲುಗೊಂಡು ಮೈಸೂರು ಲೋವರ್ ಸೆಕಂಡರೀ ಪರೀಕ್ಷಾ ದೇಶಭಾಷಾ ಪರೀಕ್ಷ್ಯರಿಗೆ ಪ್ರವೇಶಧನವು (2—8—0) ರೂಪಾಯಿಗಳಿಗೆ ಬದಲಾಗಿ (3—0—0) ರೂಪಾಯಿಗಳಂತೆ ನಿಯಮಿಸಲ್ಪಟ್ಟಿರುತ್ತೆ.

(ii) ಸ॥ 1897ನೇ ಇಸವಿ ಡಿಸೆಂಬರು ತಿಂಗಳು ಮೊದಲುಗೊಂಡು ಮೈಸೂರು ಕರ್ಣಾಟಕ ಪಂಡಿತ ಪರೀಕ್ಷೆಗೆ ಕರ್ಣಾಟಕ ಪಜನಕಾವ್ಯವು ಪೂರ್ತಿಯಾಗಿ ನಿಯಮಿಸಲ್ಪಟ್ಟಿರುತ್ತೆ.

ಮೈಸೂರು ಲೋವರ್ ಸೆಕಂಡರೀ ಪರೀಕ್ಷೆ.

ಸ॥ 1896ನೇ ಇಸವಿ ಆಗಸ್ಟ್ ತಾರೀಖು 14.

ಸಿ. ಜೆ.ಸ್ಸ್; ಸಿ. ಕೆ. ಸುಬ್ಬರಾವು ಇವರುಗಳಿಂದ ರಚಿತವಾದ ವ್ಯವಸಾಯ ಶಾಸ್ತ್ರದ ಪ್ರಥಮ ಪುಸ್ತಕವು ತತ್ಕಾಲದಲ್ಲಿ ಛಾಪಿಸಲ್ಪಡುವದಿಲ್ಲವಾದ್ದರಿಂದ ಇತಃಪರ ಮುತ್ತೊಂದು ಅಪ್ಪಣೆ ಕೊಡುವ ವರೆವಿಗೂ ಹಾರ್ಮ್ಯಾ ಸಾಹೇಬರವರಿಂದ ರಚಿಸಲ್ಪಟ್ಟ ಕನ್ನಡ ವ್ಯವಸಾಯ ಕೈಪು ಬೋಧಿನಿ ಎಂಬ ಪುಸ್ತಕವು ವ್ಯವಸಾಯ ಶಾಸ್ತ್ರಕ್ಕಾಗಿ ಮೈಸೂರು ಲೋವರ್ ಸೆಕಂಡರೀ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತೆ.

ಎಚ್. ಜೆ. ಭೂಫ್,
ಇನ್‌ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ಇನಾಂ ಇಲಾಖೆ.

ಇಸ್ತಿಹಾರ್‌ನಾಮೆ.

ನಂಬರು 1. ತಾರೀಖು 18ನೇ ಆಗಸ್ಟ್ 1896.

ಇನಾಂದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ,—ನಾಗಮಂಗಲ ತಾಲ್ಲೂಕಿನಲ್ಲಿ ಯಿರತಕ್ಕ ಜಿಲ್ಲರೆ ಇನಾಂಗಳ ಬಾಬತು (729) ಫೈನಲ್ ಟೈಟಲ್‌ಡೀಡ್ ಯಾನೆ ಕಾಯಂ ಪಟ್ಟೆಗಳು ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಬಳಿಗೆ ಬಟವಾಡೆ ಬಗ್ಗೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟಿವು.

2. ಸದರೀ ತಾಲ್ಲೂಕಿನ ಅಮಲ್‌ದಾರ್‌ರು ಪ್ರತ್ಯೇಕ ಪ್ರತ್ಯೇಕ ನೋಟಿಸ್‌ಗಳು ಬಂದ ಮೇಲೆ ಅವುಗಳನ್ನ ತೆಗದುಕೊಳ್ಳುವ ಬಗ್ಯೆ ಸದರೀ ಇನಾಂದಾರ್‌ರು ಏರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್‌ದಾರ್‌ರು ಅಂಥಾ ನೋಟಿಸ್‌ಗಳನ್ನ ದೇರ್‌ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

3. ಸದರೀ ಜಿಲ್ಲರೆ ಇನಾಂಗಳ ಬಗ್ಯೆ ಈ ಆಫಿಸಿನಿಂದ ಮೊದಲೀ ಕೊಡಲ್ಪಟ್ಟ ಹಂಗಾವಿೂಪಟ್ಟ್ಯೆಗಳು ರದ್ದುಮಾಡಲ್ಪಟ್ಟು ಇರುತ್ತೆಂದು ಇದರ ಬೆನೆಯಿಂದ ಪ್ರಕಟಿಸಲ್ಪಟ್ಟಿ ಯಿರುತ್ತೆ.

ಜೆ. ಪಿ. ಗ್ರಾಂಟ್,
ಸೂಪರಿಂಟೆಂಡೆಂಟ್ ಆಫ್ ಇನಾಂ ಸೆಟ್ಲ ಮೆಂಟ್ಸ್.

ನಂದೀದುರ್ಗದ ಡಿವಿಜ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟ್‌ನಲ್ಲಿ.

ಸ್ ೧೮೯೫—೯೬ನೇ ಇಸವಿ ಮಿನಲೇನಿಯಸ್ ಅರ್ಜೀ ನಂಬರ್ 443.

ಮೃತಪಟ್ಟ ಸಿ. ವಿ. ಕೃಷ್ಣಸಾಮಿಕಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್‌ರು ಬೆಂಗಳೂರ್ ಸಿವಿಲ್ ಅಂಡ್ ಮಿಲಿಟೆರಿ ಸ್ಟೇರ್ಷ್ ಲಕ್ಷ್ಮಣವೊದಲಿಯಾರ್ರ ಬೀದಿಯಲ್ಲಿರುವ ಸಿ. ವಿ. ಮುನಿಸಾಮಿ ಕಟ್ಟಿಯು, ಮೃತಪಟ್ಟು ಸದರೀ ಸಿ. ವಿ. ಕೃಷ್ಣಸಾಮಿಕಟ್ಟರಿಗೆ ಅವಿಭಕ್ತ ಅಂಣನು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರ್ ಸಿವಿಲ್ ಅಂಡ್ ಮಿಲಿಟೆರಿ ಸ್ಟೇರ್ಷ್ ಸ್ಥಳದ ಸಿ. ವಿ. ಮುನಿಸಾಮಿಕಟ್ಟಿಯು, ಸಿವಿಲ್ ಅಂಡ್ ಮಿಲಿಟೆರಿ ಸ್ಟೇರ್ಷ್ ಲಕ್ಷ್ಮಣವೊದಲಿಯಾರ್ರ ಬೀದಿಯ ವಾಸಸ್ಥರಾಗಿ ಮೃತಪಟ್ಟ ಸಿ. ವಿ. ಕೃಷ್ಣಸಾಮಿಕಟ್ಟರ ಜೊಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸಿ. ವಿ. ಮುನಿಸಾಮಿಕಟ್ಟರ ಅರ್ಜಿಯನ್ನು 1896ನೇ ಇಸವಿ ಸೆಪ್ಟಂಬರ್ ತಿಂಗಳ ತಾರೀಖು 22ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಕೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಿ. ವಿ. ಕೃಷ್ಣಸಾಮಿಕಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1896ನೇ ಇಸವಿ ಆಗಸ್ಟ್ ತಿಂಗಳ 28ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರಿರಾವ್, ಡಿಸ್ಟ್ರಿಕ್ಟ್ ಜಡ್ಜ್.

ಫಾರೆಸ್ಟ್ ಇಲಾಖೆ.

ಆಸ್ತಿ ಹರ್.

ತಾರೀಖು 2ನೇ ಸೆಪ್ಟಂಬರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲಿಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಸ್ಥಳಗಳಲ್ಲಿ ಅವುಗಳ ಪಕ್ಕದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟು ಡೆಪ್ಯುಟೆ ಕಮ್ಮಿಷನರವರು ಮತ್ತು ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವುವು.

ಡಿಸ್ಟ್ರಿಕ್ಟ್.	ಕೋಠಿ ಹೆಸರು.	ಹರಾಜು ತಾರೀಖು.
ಮೈಸೂರು	ಹುಣಸೂರು	28ನೇ ನವೆಂಬರ್ 1896.
ಡಿಟೋ	ಶ್ರೀರಂಗಪಟ್ಟಣ	1ನೇ ಡಿಸೆಂಬರ್ ,,
ಬೆಂಗಳೂರು	ಬೆಂಗಳೂರು	4ನೇ ಡಿಟೋ ,,
ಹಾಸನ	ಹಾಸನ	7ನೇ ಡಿಟೋ ,,
ಕಡೂರು	ಚಿಕ್ಕಮಗಳೂರು	10ನೇ ಡಿಟೋ ,,
ಶಿವಮೊಗ್ಗ	ಶಿವಮೊಗ್ಗ	15ನೇ ಡಿಟೋ ,,
ಡಿಟೋ	ಸಾಗರ	18ನೇ ಡಿಟೋ ,,
ಡಿಟೋ	ತೀರ್ಥಹಳ್ಳಿ	22ನೇ ಡಿಟೋ ,,

2. ಈ ವರುಷ (i) ಬೆಂಗಳೂರು, ಹಾಸನ, ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹಳೇ ತರಹೆ ಪ್ರಕಾರವೂ (ii) ಆಜಮಾಯಿಷಿ ಬಗ್ಯೆ ಮೈಸೂರು ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹೊಸ ಯಾ ಬೊಂಬಾಯಿ ತರಹೆ ಪ್ರಕಾರವೂ ಯರಡು ವಿಧವಾಗಿ ಸಂದೆಲನ್ನ ರಾಸು ಮಾಡಿಸಿರುತ್ತೆ.

3. ಇದುವರಿವಿಗೂ ಜಾರಿಯಲ್ಲಿರುವ ವಜನಿ ಬಟ್ಟ್ಯಗಳೇ ಈಗಲೂ ಉಪಯೋಗಿಸಲ್ಪಡುವುವು.

4. ಪ್ರತಿ ಕೋಠಿಯಲ್ಲಿಯೂ ಬಿಕರಿ ಬಗ್ಯೆ ವೆದಗಿಸಲ್ಪಡುವ ಸಂದಲಿನ ತರಹೆಗಳ ವೊತ್ತವನ್ನ ಇದರಡಿ ವಿವರಿಸಿದೆ.